# ಚಂದ್ರಮನ ಸಾಹಿತ್ಯದ ಬೆಳದಿಂಗಳು

■ ಮಂಜುಶ್ರೀ ಕಡಕೋಳ

ಕೊರೊನಾ ಸೋಂಕಿನ ಆತಂಕ ಬಹುತೇಕರ ಜೀವನವನ್ನು ಆನ್‌ಲೈನ್‌ಮಯವಾಗಿಸಿದೆ. ಸಾಂಸ್ಕೃತಿಕ ಕ್ಷೇತ್ರವೂ ಇದಕ್ಕೆ ಹೊರತಾಗಿಲ್ಲ. ಸಾಮಾಜಿಕ ಜಾಲತಾಣಗಳ ಮೂಲಕ ಸಾಹಿತ್ಯಾಸಕ್ತರು ಒಂದುಗೂಡಿ ಹಲವು ಸಾಹಿತ್ಯಿಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. ಅಂಥದ್ದೊಂದು ಸಮಾನ ಮನಸ್ಕರ ಗುಂಪು ‘ಚಂದ್ರಮ’.

ಹಿರಿಯ ಸಾಹಿತಿ ಅರವಿಂದ ಮಾಲಗತ್ತಿ, ಕೋಲಾರದ ಇಬ್ಬನಿ ಮಂಜುನಾಥ್ ಮತ್ತು ನ. ಗುರುಮೂರ್ತಿ ಅವರ ಆಸಕ್ತಿ ಮತ್ತು ಪರಿಶ್ರಮದ ಫಲ ‘ಚಂದ್ರಮ’ ವಾಹಿನಿ. ಪ್ರತಿವಾರವೂ ಯೂಟ್ಯೂಬ್‌ನಲ್ಲಿ ಸಾಹಿತಿಯೊಬ್ಬರ ಸಂಕ್ಷಿಪ್ತ ಪರಿಚಯ ಮಾಡಿಕೊಡುತ್ತಿರುವ ಈ ತಂಡ ಈಗಾಗಲೇ 60ಕ್ಕೂ ಹೆಚ್ಚಿನ ಕನ್ನಡ ಸಾಹಿತಿಗಳನ್ನು ಪರಿಚಯಿಸಿದೆ.

ಟ್ವಿಟ್ಟರ್, ಫೇಸ್‌ಬುಕ್‌ಗಳಲ್ಲೂ ಖಾತೆ ತೆರೆದಿರುವ ‘ಚಂದ್ರಮ’ ಸಾಮಾಜಿಕ ಮಾಧ್ಯಮಗಳ ಮೂಲಕ ಸಾಹಿತ್ಯಾಸಕ್ತರನ್ನು ತಲುಪುತ್ತಿದೆ. ವಿದ್ಯಾರ್ಥಿಗಳು, ಉಪನ್ಯಾಸಕರು ಮತ್ತು ಸ್ಪರ್ಧಾತ್ಮಕ ಪರೀಕ್ಷಾರ್ಥಿಗಳಿಗೂ ‘ಚಂದ್ರಮ’ ಮಾಹಿತಿ ಒದಗಿಸುತ್ತಿದೆ.

### ಚಕೋರನಿಂದ ಚಂದ್ರಮನವರೆಗೆ...

ಚಂದ್ರಮ ವಾಹಿನಿಯ ಮೂಲ ಚಕೋರ ಕಾರ್ಯಕ್ರಮ. ಅರವಿಂದ ಮಾಲಗತ್ತಿ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ‘ಚಕೋರ’ ಶೀರ್ಷಿಕೆಯಡಿ ಆರಂಭವಾದ ಸಾಹಿತ್ಯದ ಚಟುವಟಿಕೆಗಳು ರಾಜ್ಯದ ಹಲವು ಜಿಲ್ಲೆಗಳಲ್ಲಿ ಹೆಸರು ಗಳಿಸಿದ್ದವು. ರಾಜ್ಯದಾದ್ಯಂತ 40 ಸದಸ್ಯರು ಚಕೋರ ಕಾರ್ಯಕ್ರಮವನ್ನು ತಮ್ಮ ಜಿಲ್ಲೆಗಳಲ್ಲಿ ಜನಪ್ರಿಯಗೊಳಿಸಿದ್ದರು. ಒಂದೂವರೆ ವರ್ಷ ಯಶಸ್ವಿಯಾಗಿ ಚಕೋರ ನಡೆಯಿತಾದರೂ, ಬದಲಾದ ರಾಜಕೀಯ ಸಂದರ್ಭದಲ್ಲಿ ಅರವಿಂದ ಮಾಲಗತ್ತಿ ಅವರು ಅಕಾಡೆಮಿಗೆ ರಾಜೀನಾಮೆ ನೀಡಿದ ನಂತರ ಸ್ಥಗಿತಗೊಂಡಿತು.

‘ನನ್ನ ರಾಜೀನಾಮೆಯ ನಂತರ ಚಕೋರ ನಿಂತುಹೋಯಿತು. ಆಗ ಇಪ್ಪತ್ತೇಳು ಜಿಲ್ಲೆಗಳ ಸದಸ್ಯರನ್ನು ಚಂದ್ರಮ ಅನ್ನುವ ವೇದಿಕೆಯಲ್ಲಿ ಒಗ್ಗೂಡಿಸಿದೆವು. ಇಲ್ಲಿ ಯಾವುದೇ ಹಣ ಸಹಾಯವಿಲ್ಲದೇ ಸ್ವ ಆಸಕ್ತಿಯಿಂದ ಕಾರ್ಯಕ್ರಮ ನಡೆಸಿಕೊಂಡು ಹೋಗುತ್ತಿದ್ದಾರೆ. ಇಲ್ಲಿ ಒಳಾಂಗಣ ಕಾರ್ಯಕ್ರಮಗಳು ಮಾತ್ರ ನಡೆಯುತ್ತವೆ. ಕೊರೊನಾ ವೈರಸ್ ಹಾವಳಿ ಶುರುವಾಗುವ ಮುನ್ನವೇ ಚಂದ್ರಮ ಆರಂಭಿಸಿದ್ದೆವು’ ಎನ್ನುತ್ತಾರೆ ಅರವಿಂದ ಮಾಲಗತ್ತಿ.

‘ಕೊರೊನಾಕ್ಕೆ ಕಾವ್ಯ ಮದ್ದು ಅನ್ನುವ ವಿಶೇಷ ಕಾರ್ಯಕ್ರಮವನ್ನೂ ಸಾದರಪಡಿಸಿದ್ದೇವೆ. ವಾರದ ವ್ಯಕ್ತಿ ಮಾಲಿಕೆಯಲ್ಲಿ ವಾರಕ್ಕೊಮ್ಮೆ ಒಬ್ಬ ಸಾಹಿತಿ ಪರಿಚಯ ಮಾಡಿಕೊಡುತ್ತಿದ್ದೇವೆ. ಶಾಲಾ–ಕಾಲೇಜುಗಳ ಕನ್ನಡ ಪಠ್ಯಗಳಲ್ಲಿ ಲೇಖಕರ ಪರಿಚಯ ಒಂದೆರಡು ಪ್ಯಾರಾಗಳಷ್ಟೇ ಇರುತ್ತವೆ. ವಿದ್ಯಾರ್ಥಿ–ಉಪನ್ಯಾಸಕರಿಗೆ ಲೇಖಕರ ಪರಿಚಯ ಅಷ್ಟಾಗಿ ಆಗುತ್ತಿರಲಿಲ್ಲ. ಈಗ ಚಂದ್ರಮದ ಮೂಲಕ ಲೇಖಕರ ಪರಿಚಯವನ್ನು ವಿವರವಾಗಿ ಮಾಡಿ ಕೊಡಲಾಗುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಿದೆ. ಚಕೋರದಲ್ಲಿ ಸಾಹಿತಿಗಳನ್ನೇ ನೇರವಾಗಿ ವಿದ್ಯಾರ್ಥಿಗಳ ಮುಂದೆ ನಿಲ್ಲಿಸುತ್ತಿದ್ದೆವು. ಒಂದು ಪದ್ಯವನ್ನು ಬರೆದ ಕವಿಯನ್ನೇ ವಿದ್ಯಾರ್ಥಿಗಳೊಂದಿಗೆ ಸಂವಾದ ಮಾಡಲು ಆಸ್ಪದ ನೀಡುತ್ತಿದ್ದೆವು. ಅದೇ ಮಾದರಿಯಲಿ ಯುಟ್ಯೂಬ್‌ನಲ್ಲಿ ವಾರದ ವ್ಯಕ್ತಿ ಮಾಲಿಕೆಯಲ್ಲಿ ಸಾಹಿತಿಗಳನ್ನು ಪರಿಚಯಿಸಲಾಗುತ್ತಿದೆ. ಇಲ್ಲಿ ಯಾವುದೇ ಜಾತಿ, ಲಿಂಗ ಮತ್ತು ಪಂಥ ಭೇದವಿಲ್ಲದೇ ಪರಿಚಯಿಸಲಾಗುತ್ತಿದೆ’ ಎನ್ನುತ್ತಾರೆ ಮಾಲಗತ್ತಿ.




‘ಚಂದ್ರಮ ಸಂಪೂರ್ಣ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿದೆ. ‘ಚಕೋರ’ದಲ್ಲಿ ಹೆಚ್ಚು ಕ್ರಿಯಾಶೀಲರಾಗಿದ್ದ ನ. ಗುರುಮೂರ್ತಿ ಮತ್ತು ಇಬ್ಬನಿ ಮಂಜು ಚಂದ್ರಮದಲ್ಲೂ ಹೆಚ್ಚಿನ ಶ್ರಮ ವಹಿಸಿದ್ದಾರೆ. ನಾನು ಮಾರ್ಗದರ್ಶಕ ಮಾತ್ರ’ ಎಂದು ಮಾಲಗತ್ತಿ ಅವರು ‘ಚಂದ್ರಮ’ನ ಚಟುವಟಿಕೆಗಳ ಕುರಿತು ಹೇಳುತ್ತಾರೆ.

### ಕೃಷಿ ಜತೆಗೆ ಸಾಹಿತ್ಯ ಕೃಷಿ

ವೃತ್ತಿಯಲ್ಲಿ ಕೃಷಿಕರಾಗಿರುವ ಇಬ್ಬನಿ ಮಂಜುನಾಥ್ ಅವರು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನ ನಡಂಪಲ್ಲಿ ಗ್ರಾಮದಲ್ಲಿ ಕೃಷಿ ಕೆಲಸ ಮಾಡುತ್ತಲೇ ಸಾಹಿತ್ಯ ಕೃಷಿಯನ್ನೂ ಮಾಡುತ್ತಿದ್ದಾರೆ. ‘ಪ್ರತಿ ಭಾನುವಾರ ಗುರುಮೂರ್ತಿ ಮತ್ತು ನಾನು, ಮಾಲಗತ್ತಿ ಸರ್ ಅವರೊಂದಿಗೆ ಚಂದ್ರಮನ ಚಟುವಟಿಕೆಗಳ ಕುರಿತು ಚರ್ಚಿಸುತ್ತೇವೆ. ನಾನು ಸಾಹಿತಿಗಳ ಮಾಹಿತಿ ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳ ಸಂಯೋಜನೆ ಇತ್ಯಾದಿ ಕೆಲಸ ನೋಡಿಕೊಳ್ಳುತ್ತೇನೆ’ ಎನ್ನುತ್ತಾರೆ ಮಂಜುನಾಥ್.




‘ಸಾಹಿತ್ಯವನ್ನು ಆಧುನಿಕ ಮಾಧ್ಯಮಗಳ ಮೂಲಕ ಜನರಿಗೆ ಹೇಗೆ ತಲುಪಿಸಬಹುದು ಅನ್ನೋದಕ್ಕೆ ಚಂದ್ರಮ ಸಾಕ್ಷಿ. ಸರಜೂ ಕಾಟ್ಕರ್, ಅರವಿಂದ ಮಾಲಗತ್ತಿ ಅವರ ಮಾರ್ಗದರ್ಶನವೇ ನಮಗೆ ಪ್ರೇರಣೆ. ಕೆಸೆಟ್, ನೆಟ್ ಸೇರಿದಂತೆ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಚಂದ್ರಮದಿಂದ ಅನುಕೂಲವಾಗುತ್ತಿದೆ ಎಂದು ಹಲವರು ಪ್ರತಿಕ್ರಿಯಿಸಿದ್ದಾರೆ’ ಎನ್ನುತ್ತಾರೆ.




### ಆಡಿಯೊ-ವಿಡಿಯೊ ಸಂಕಲನ

ಆಯ್ಕೆ ಮಾಡಿದ ಸಾಹಿತಿಗೆ ಸಂಬಂಧಿಸಿದ ಸಮಗ್ರ ವಿವರಗಳನ್ನು ಕಲೆಹಾಕಿ ಅವುಗಳಲ್ಲಿ ಆಯ್ದ ಭಾಗಗಳನ್ನು ಸಂಕಲನ ಮಾಡಿ ‘ಚಂದ್ರಮ’ ವಾಹಿನಿಯಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ವಿಡಿಯೊ ಎಡಿಟಿಂಗ್ ಮಾಡಿ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡುವ ಹೊಣೆ ಶಿಕ್ಷಕರಾದ ನ. ಗುರುಮೂರ್ತಿ ಅವರದ್ದು.

ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಗ್ರಾಮವೊಂದರಲ್ಲಿ ಶಿಕ್ಷಕರಾಗಿರುವ ಗುರುಮೂರ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಕಾರ್ಯದರ್ಶಿಯಾಗಿಯೂ ಕೆಲಸ ಮಾಡುತ್ತಿದ್ದಾರೆ. ಸಾಹಿತಿಗಳ ಮಾಲಿಕೆಯಂತೆಯೇ ಮುಂಬರುವ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸಾಧಕರ ಸರಣಿಯನ್ನೂ ಮಾಡುವ ಉದ್ದೇಶವಿದೆ ಎನ್ನುತ್ತಾರೆ ಗುರುಮೂರ್ತಿ. ■

ಚಂದ್ರಮ ವೀಕ್ಷಣೆಗೆ youtu.be/ ouGHwjA_ IbM ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.